

# ಹೆಚ್. ಮುನಿಲಿಂಗಪ್ಪ

**(10.05.1953 – 06.08.2017)**

ಬಿ.ಎಸ್.ಎನ್.ಎಲ್.ಇ.ಯು ಕರ್ನಾಟಕ ವಲಯದ ವಲಯ ಉಪಾಧ್ಯಕ್ಷರಾಗಿ,
ಸೇವಾ – ಬಿ.ಎಸ್.ಎನ್.ಎಲ್. ನ ವಲಯ ಕಾರ್ಯದರ್ಶಿಯಾಗಿ ಹಾಗೂ
ಬಿ.ಎಸ್.ಎನ್.ಎಲ್.ಇ.ಯು ಸಿವಿಲ್/ಎಲೆಕ್ಟ್ರಿಲ್ ವಿಭಾಗದ ವಲಯ ಕಾರ್ಯದರ್ಶಿಯಾಗಿ

ಸೇವೆ ಸಲ್ಲಿಸಿದ್ದ ಸಂಗಾತಿ.ಹೆಚ್.ಮುನಿಲಿಂಗಪ್ಪ ಅವರು, ದಿನಾಂಕ **06.08.2017** ರಂದು, ಬೆಳಗಿನ ಜಾವ ಸುಮಾರು ೩ಗಂಟೆ ಸುಮಾರಿಗೆ ಖಾಸಗೀ ಆಸ್ಪತ್ರೆಯೊಂದರಲ್ಲಿ ನಿಧನ ಹೊಂದಿದರು ಎಂದು ತಿಳಿಸಲು ನಾವು ವಿಷಾದಿಸುತ್ತೇವೆ.

**1978** ಅಂಚೆ-ತಂತಿ ಇಲಾಖೆಗೆ, ಹುಬ್ಬಳ್ಳಿಯಲ್ಲಿ ಸೇವೆಗೆ ಸೇರಿದ ಮುನಿಲಿಂಗಪ್ಪ ಅವರಿಗೆ **64** ವರುಷ ವಯಸ್ಸಾಗಿದ್ದು, **31.05.2013** ರಂದು, ಬಿ.ಎಸ್.ಎನ್.ಎಲ್. ಸೇವೆಯಿಂದ ನಿವೃತ್ತಿ ಹೊಂದಿದ್ದರು.
ಕಳೆದ ಕೆಲವು ತಿಂಗಳುಗಳಿಂದ ಅವರು ಅಸ್ವಸ್ಥರಾಗಿದ್ದರು; ಮಾನಸಿಕವಾಗಿ ಹಾಗೂ ದೈಹಿಕವಾಗಿ ಸ್ವಲ್ಪ ಬಳಲಿದ್ದರು. ಸಂಗಾತಿ ಮುನಿಲಿಂಗಪ್ಪ ಅವರು, ಬಹಳ ಧೀರ್ಘಕಾಲದಿಂದ ಕರ್ನಾಟಕ ವಲಯದ ಸಿವಿಲ್/ಎಲೆಕ್ಟ್ರಿಲ್ ವಿಭಾಗದ ವಲಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ನನ್ನ ಮತ್ತು ಅವರ ಪರಿಚಯ ಮೊದಲು ಆಗಿದ್ದೇ ನಾನು ಎನ್.ಎಫ್.ಟಿ.ಇ. ಆಡಳಿತ ಕಛೇರಿ ಸಂಘಟನೆಯ ವಲಯ ಕಾರ್ಯದರ್ಶಿಯಾಗಿದ್ದಾಗ, ಅವರು ಸಿವಿಲ್/ಎಲೆಕ್ಟ್ರಿಲ್ ವಿಭಾಗದ ವಲಯ ಕಾರ್ಯದರ್ಶಿಯಾಗಿದ್ದರು. ಅಖಿಲ ಭಾರತ ಸಮ್ಮೇಳನಗಳಲ್ಲಿ ಹಾಗೂ ಕೇಂದ್ರ ಸರ್ಕಾರಿ ನೌಕರರ ಸಮನ್ವಯ ಸಮಿತಿ ಸಭೆಗಳಲ್ಲಿ ನಮ್ಮ ಭೇಟಿಯಾಗುತಿತ್ತು.
ಕರ್ನಾಟಕ ವಲಯದಲ್ಲಿ ಇ.೩ (ನಂಬೂದಿರಿ) ಸಂಘಟನೆ ಕೆಲವು ಜಿಲ್ಲೆಗಳಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದಾಗ, ಚೆನ್ನೈನ ಸಿವಿಲ್/ಎಲೆಕ್ಟ್ರಿಲ್ ವಿಭಾಗದ ಅಖಿಲ ಭಾರತ ಸಹಾಯಕ ಪ್ರಧಾನ ಕಾರ್ಯದರ್ಶಿ ಸಂಗಾತಿ ಕಿಳ್ಳಿವಳವನ್ ಅವರ ಮುಖಾಂತರ, ಮುನಿಲಿಂಗಪ್ಪ ಅವರು, ಸಂಗಾತಿ. ನಂಬೂದಿರಿ ಅವರ ಸಂಪರ್ಕಕ್ಕೆ ಬಂದು, ಕರ್ನಾಟಕ ವಲಯದಲ್ಲಿ ಇ.೩ (ನಂಬೂದಿರಿ) ಸಂಘಟನೆಯ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತಿದ್ದರು.

ನಂತರದಲ್ಲಿ, **22** ಮಾರ್ಚಿ **2001** ರಲ್ಲಿ, ಬಿ.ಎಸ್.ಎನ್.ಎಲ್.ಇ.ಯು ಸಂಘಟನೆ ವಿಶಾಖಪಟ್ಟನಂ ನಲ್ಲಿ ವಿಧ್ಯುಕ್ತವಾಗಿ ಪ್ರಾರಂಭಗೊಂಡಾಗ, ಅಖಿಲ ಭಾರತ ಮಟ್ಟದಲ್ಲಿ ಸಿವಿಲ್/ಎಲೆಕ್ಟ್ರಿಲ್ ವಿಭಾಗವೂ ಬಿ.ಎಸ್.ಎನ್.ಎಲ್.ಇ.ಯು ವಿನಲ್ಲಿ ವಿಲೀನಗೊಂಡು, ಕರ್ನಾಟಕದಲ್ಲಿ ಮುನಿಲಿಂಗಪ್ಪ ಅವರು ಬಿ.ಎಸ್.ಎನ್.ಎಲ್.ಇ.ಯು ವಿನ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದರು.
ನಂತರದಲ್ಲಿ, ಎಸ್.ಸಿ/ಎಸ್.ಟಿ. ಸಂಘಟನೆಯು ಅಖಿಲ ಭಾರತ ಮಟ್ಟದಲ್ಲಿ, ಮೊದಲ ಸದಸ್ಯತ್ವ ಪರಿಶೀಲನೆಗೂ ಮುಂಚಿತವಾಗಿಯೇ ಬಿ.ಎಸ್.ಎನ್.ಎಲ್.ಇ.ಯು ವಿನ ಜೊತೆ ಗುರುತಿಸಿಕೊಂಡಾಗ, ಕರ್ನಾಟಕ

ವಲಯದಲ್ಲಿಯೂ ಇದೇ ಸೌಹಾರ್ದ ಮೈತ್ರಿ ಪ್ರಾರಂಭವಾಗಿ, ಮುನಿಲಿಂಗಪ್ಪ ಅವರು ವಲಯ ಮಟ್ಟದಲ್ಲಿ ನೇರವಾಗಿ ಬಿ.ಎಸ್.ಎನ್.ಎಲ್.ಇ.ಯು ವಿನ ಸಕ್ರಿಯ ಕಾರ್ಯಕರ್ತರಾದರು.

ಕರ್ನಾಟಕ ವಲಯದಲ್ಲಿ ಬಿ.ಎಸ್.ಎನ್.ಎಲ್.ಇ.ಯು ತನ್ನ ಮೊದಲ ಸ್ಥಾಪನಾ ವಲಯ ಸಮ್ಮೇಳನವನ್ನು ಮಂಗಳೂರಿನಲ್ಲಿ ಮಾಡಿದಾಗ,(ಸಪ್ಟೆಂಬರ್ **2001**) ಸಂಗಾತಿ ಮುನಿಲಿಂಗಪ್ಪ ಅವರು ಸಹಾಯಕ ವಲಯ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು;

ಎರಡನೇ ಸಮ್ಮೇಳನ ಬೆಂಗಳೂರಿನಲ್ಲಿ ನಡೆದಾಗ,(ಏಪ್ರಿಲ್ **2006**) ವಲಯದ ಉಪಾಧ್ಯಕ್ಷರಾಗಿ ಆಯ್ಕೆಗೊಂಡ ಸಂಗಾತಿ ಮುನಿಲಿಂಗಪ್ಪ ಅವರು, ಈ ಹುದ್ದೆಯಲ್ಲಿ ಜೂನ್ **2012** ರ ವರೆವಿಗೂ ಇದ್ದು, ನಂತರದಲ್ಲಿ ವಲಯದ ಸೇವಾ ಬಿ.ಎಸ್.ಎನ್.ಎಲ್ ಸಂಘಟನೆಯ ಸಂವಿಧಾನದ ಕಾರಣದಿಂದ ತಮ್ಮ ಈ ಹುದ್ದೆಗೆ ರಾಜಿನಾಮೆ ಕೊಟ್ಟು, ಸೇವಾ ಬಿ.ಎಸ್.ಎನ್.ಎಲ್. ನ ವಲಯ ಕಾರ್ಯದರ್ಶಿಯಾಗಿ ಮಾತ್ರ ಮುಂದುವರೆದರು.

ಸೇವಾ ಬಿ.ಎಸ್.ಎನ್.ಎಲ್. ಸಂಘಟನೆಯು ಬಿ.ಎಸ್.ಎನ್.ಎಲ್.ಇ.ಯು ವಿನ ಜೊತೆ ಹೊಂದಿದ್ದ ಮೈತ್ರಿಗೆ ವಲಯ ಮಟ್ಟದಲ್ಲಿ ಇಂದಿನವರೆವಿಗೂ ಯಾವುದೇ ರೀತಿಯ ಧಕ್ಕೆ ಬಾರದ ಹಾಗೆ ನಂತರದಲ್ಲಿಯೂ ನೋಡಿಕೊಂಡವರು ಸಂಗಾತಿ ಮುನಿಲಿಂಗಪ್ಪ ಅವರು.

**2002** ರಲ್ಲಿ ನಡೆದ ಮೊದಲನೇ ಸದಸ್ಯತ್ವ ಪರಿಶೀಲನೆಯಿಂದ ಹಿಡಿದು, ಐದನೇ ಸದಸ್ಯತ್ವ ಪರಿಶೀಲನೆಯ ವರೆವಿಗೆ, ಜಿಲ್ಲಾ ಮಟ್ಟದ ಪ್ರಚಾರ ಸಭೆಗಳಲ್ಲಿ ಬಿ.ಎಸ್.ಎನ್.ಎಲ್.ಇ.ಯು ವಿನ ಪರವಾಗಿ ಭಾಗವಹಿಸಿದ ಸಂಗಾತಿ ಮುನಿಲಿಂಗಪ್ಪ ಅವರು.

ಅಖಿಲ ಭಾರತ ಮಟ್ಟದಲ್ಲಿ, ಸೇವಾ ಬಿ.ಎಸ್.ಎನ್.ಎಲ್ ಸಂಘಟನೆಯು ಬಿ.ಎಸ್.ಎನ್.ಎಲ್.ಇ.ಯು ವಿನ ಜೊತೆ ಮೈತ್ರಿ ಹೊಂದಾಣಿಕೆ ಮಾಡಿಕೊಳ್ಳಲು ಶಿಫಾರಸ್ಸು ಮಾಡಿದ ಪ್ರಮುಖರಲ್ಲಿ ಸಂಗಾತಿ ಮುನಿಲಿಂಗಪ್ಪ ನವರ ಹೆಸರನ್ನು ನಾವು ಸ್ಮರಿಸಲೇ ಬೇಕು.

**2004** ರಲ್ಲಿ ನಡೆದ ಎರಡನೇ ಸದಸ್ಯತ್ವ ಪರಿಶೀಲನೆಯ ನಂತರದಲ್ಲಿ, ಬಿ.ಎಸ್.ಎನ್.ಎಲ್.ಇ.ಯು ಸಂಘಟನೆಯು ಏಕೈಕ ಮಾನ್ಯತೆ ಪಡೆದ ಸಂಘಟನೆಯಾಗಿ ಹೊರಹೊಮ್ಮಿದಾಗ, ಕರ್ನಾಟಕ ವಲಯದಲ್ಲಿ ಸಂಗಾತಿ ಮುನಿಲಿಂಗಪ್ಪ ಅವರನ್ನು ವಲಯದ ಕೌನ್ಸಿಲ್ ಸದಸ್ಯರನ್ನಾಗಿ ಆಯ್ಕೆ ಮಾಡಿ ಅವರಿಗೆ ನಮ್ಮ ಸಂಘಟನಾ ಕೃತಜ್ಞತೆಗಳನ್ನು ಸೂಚಿಸಿದೆವು.

ದೂರದೃಷ್ಟಿಯ ಆಲೋಚನೆಗಳನ್ನು ಮೈಗೂಡಿಸಿಕೊಂಡಿದ್ದ ಸಂಗಾತಿ ಮುನಿಲಿಂಗಪ್ಪ, ಸಂಘಟನಾ ಚಾಕಚಕ್ಯತೆಯಿಂದ ಸಿವಿಲ್/ಎಲೆಕ್ಟ್ರಿಲ್ ವಿಭಾಗದಲ್ಲಿ ಕೇವಲ ಬಿ.ಎಸ್.ಎನ್.ಎಲ್.ಇ.ಯು ಸಂಘಟನೆಗೆ ಮಾತ್ರ ಸದಸ್ಯತ್ವ ಇರುವ ಹಾಗೆ ನೋಡಿಕೊಂಡು, ನಮ್ಮ ಸಂಘಟನೆಯನ್ನು ಬಲಿಷ್ಠ ಸಂಘಟನೆಯಾಗಿ ಬೆಳೆಸುವ ನಿಟ್ಟಿನಲ್ಲಿ ಸಂಗಾತಿ ಮುನಿಲಿಂಗಪ್ಪ ಅವರ ಪಾತ್ರ ಬಹಳ ದೊಡ್ಡದು; ಅದೇ ರೀತಿ, ತಮ್ಮ ನಂತರದಲ್ಲಿ, ಸಿವಿಲ್/ಎಲೆಕ್ಟ್ರಿಲ್ ವಿಭಾಗದಲ್ಲಿ ಅನೇಕ ಯುವ ಕಾರ್ಯಕರ್ತರು ಬಿ.ಎಸ್.ಎನ್.ಎಲ್.ಇ.ಯು ಸಂಘಟನೆಗೆ ಸಕ್ರಿಯ ಕಾರ್ಯಕರ್ತರಾಗುವ ಹಾಗೆ ಮಾಡಿದ್ದರಲ್ಲಿ ಕೂಡಾ,ಸಂಗಾತಿ ಮುನಿಲಿಂಗಪ್ಪ ಅವರ ಪಾತ್ರವನ್ನು ನಾವು ಅತ್ಯಂತ ಗೌರವದಿಂದ ಗುರುತಿಸಬೇಕು.

ಶಿಸ್ತು, ಕಾನೂನು ಮತ್ತು ಎಸ್.ಸಿ/ಎಸ್.ಟಿ. ಜನಾಂಗದವರನ್ನು ರಕ್ಷಣೆ ಮಾಡುವು ವಿಷಯಗಳಲ್ಲಿ ಸ್ವಲ್ಪವೂ ರಾಜಿಯಾಗದ, ಅತ್ಯಂತ ಶಿಸ್ತಿನಿಂದ- ಸುಂದರವಾದ ಬಟ್ಟೆಗಳನ್ನು ತೊಡುತ್ತಿದ್ದ, ಆದರೆ ಮುಂಗೋಪಿಯಾಗಿದ್ದ ಸಂಗಾತಿ ಮುನಿಲಿಂಗಪ್ಪ ಅವರು ತಮ್ಮ ಸಂಘಟನಾ ಕಾರ್ಯವೆಸಗುವುದರಲ್ಲಿ ಕೆಲವರೊಟ್ಟಿಗೆ ಸ್ನೇಹವನ್ನೂ ಕಳೆದುಕೊಳ್ಳಬೇಕಾಯಿತು.

ಬಿ.ಎಸ್.ಎನ್.ಎಲ್.ಇ.ಯು ಮತ್ತು ಸೇವಾ ಬಿ.ಎಸ್.ಎನ್.ಎಲ್. ಸಂಘಟನೆಗಳು ಕರ್ನಾಟಕ ವಲಯದಲ್ಲಿ ಬಲಿಷ್ಠವಾಗಿ ಬೆಳೆಯಲು ಮತ್ತು ಅಖಿಲ ಭಾರತ ಮಟ್ಟದಲ್ಲಿ, ಕರ್ನಾಟಕ ವಲಯದ ಹೆಜ್ಜೆ ಗುರುತುಗಳನ್ನು ಮೂಡಿಸಲು ಪ್ರಮಾಣಿಕವಾಗಿ ಪ್ರಯತ್ನಿಸಿದ ಸಂಗಾತಿ ಮುನಿಲಿಂಗಪ್ಪ ಅವರನ್ನು ಕಳೆದುಕೊಂಡಿದ್ದೇವೆ; ಅತ್ಯಂತ ನೋವಿನಲ್ಲಿ ನಾವು ಕಳೆದ ದಿನಗಳ ಸಂಘಟನಾ ಇತಿಹಾಸವನ್ನು ಗುರುತಿಸುತಿದ್ದೇವೆ;

ಅಗಲಿದ ಸಂಗಾತಿಗೆ, ಸಹೋದರನಿಗೆ,

ಕೆಂಪು ವಂದನೆಗಳು

ಜೈ ಭೀಮ್.

ಗುಂಡಣ್ಣ ಸಿ.ಕೆ.
ವಲಯ ಕಾರ್ಯದರ್ಶಿ,ಬಿ.ಎಸ್.ಎನ್.ಎಲ್.ಇ.ಯು,
ಕರ್ನಾಟಕ ವಲಯ, ಬೆಂಗಳೂರು

**07.08.2017.**